ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2018–19 ದಿನಾಂಕ: 13–11–2018

# ಪತ್ರಿಕಾ ಪ್ರಕಟಣೆ

# ವಾಯುಪಡೆ ನೇಮಕಾತಿ ರ್‍ಯಾಲಿ

ಬೆಂಗಳೂರು, ನವೆಂಬರ್ 13 (ಕರ್ನಾಟಕ ವಾರ್ತೆ)

ಭಾರತೀಯ ವಾಯುಪಡೆಯು, ಗ್ರೂಪ್ 'ವೈ' (ಐಎಎಫ್ (ಎಸ್) ಟ್ರೇಡ್‌ನಲ್ಲಿ ಏರ್‌ಮೆನ್‌ರನ್ನು ಆಯ್ಕೆ ಮಾಡುವುದಕ್ಕೆ ಸಂಬಂಧಿಸಿದಂತೆ, ಚಾಮುಂಡಿ ವಿಹಾರ ಕ್ರೀಡಾಂಗಣ, ನಜರ್‌ಬಾದ್, ಮೈಸೂರು (ಕರ್ನಾಟಕ) ಇಲ್ಲಿ ನೇಮಕಾತಿ ರ್‍ಯಾಲಿಯನ್ನು ಆಯೋಜಿಸಲಾಗಿದೆ.

ಡಿಸೆಂಬರ್ 5 ರಂದು ಬೆಳಗಾವಿ, ಬಾಗಲಕೋಟೆ, ವಿಜಯಪುರ, ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ಧಾರವಾಡ ಮತ್ತು ಉತ್ತರ ಕನ್ನಡ (ಕಾರವಾರ)–ದೇಹದಾರ್ಢ್ಯತೆ ಲಿಖಿತ ಪರೀಕ್ಷೆಯನ್ನು ಒಟ್ಟು 9 ಜಿಲ್ಲೆಗಳಲ್ಲಿ (ಎಟಿ–I ಎಟಿ–II ಡಿಎಫ್‌ಟಿ ಮತ್ತು 06ನೇ ಡಿಸೆಂಬರ್ 18 ರಂದು ಅರ್ಜಿಗಳ ಭರ್ತಿ)

ಡಿಸೆಂಬರ್ 7 ರಂದು ಬೆಂಗಳೂರು, ರಾಮನಗರ, ಮಂಡ್ಯ, ಕೋಲಾರ, ಚಿಕ್ಕಬಳ್ಳಾಪುರ, ಚಾಮರಾಜನಗರ, ಮೈಸೂರು, ಮಡಿಕೇರಿ, ದಕ್ಷಿಣ ಕನ್ನಡ (ಮಂಗಳೂರು) ಚಿಕ್ಕಮಗಳೂರು, ಚಿತ್ರದುರ್ಗ, ತುಮಕೂರು, ಹಾಸನ, ಗದಗ, ಕೊಪ್ಪಳ, ಹಾವೇರಿ, ಬಳ್ಳಾರಿ, ದಾವಣಗೆರೆ, ಶಿವಮೊಗ್ಗ ಮತ್ತು ಉಡುಪಿ ಸೇರಿದಂತೆ ಒಟ್ಟು 20 ಜಿಲ್ಲೆಗಳಲ್ಲಿ (ಎಟಿ–I ಎಟಿ–II ಡಿಎಫ್‌ಟಿ ಮತ್ತು 08ನೇ ಡಿಸೆಂಬರ್ 18 ರಂದು ಅರ್ಜಿಗಳ ಭರ್ತಿ) ನೇಮಕಾತಿ ರ್‍ಯಾಲಿಯನ್ನು ಆಯೋಜಿಸಲಾಗಿದೆ.

5 ಮತ್ತು 7ನೇ ಡಿಸೆಂಬರ್ 2018 ರಂದು ನಡೆಯುವ ಲಿಖಿತ ಪರೀಕ್ಷೆಯಲ್ಲಿ ಉತ್ತೀರ್ಣರಾಗುವಂತಹ ಅಭ್ಯರ್ಥಿಗಳು ನಂತರದ ದಿನಗಳಂದು ಉಳಿದ ಆಯ್ಕೆ ಪ್ರಕ್ರಿಯೆಗಾಗಿ ನಡೆಯುವ ಲಿಖಿತ ಪರೀಕ್ಷೆಗೆ ಹಾಜರಿರಬೇಕಾಗುತ್ತದೆ.

ಕರ್ನಾಟಕ ರಾಜ್ಯಕ್ಕೆ ಸೇರಿದ ಭಾರತೀಯ ನಾಗರಿಕರಾಗಿರುವಂತಹ ಅಥವಾ ಕರ್ನಾಟಕ ರಾಜ್ಯದಲ್ಲಿ ಪಿಯುಸಿ/10+2/ ಇಂಟರ್‌ಮೀಡಿಯೇಟ್ ಪೂರ್ಣಗೊಳಿಸಿರುವಂತಹ ಅವಿವಾಹಿತ ಪುರುಷರು ಮಾತ್ರ ಅರ್ಹರಾಗಿರುತ್ತಾರೆ, ಅಭ್ಯರ್ಥಿಯು 14 ನೇ ಜುಲೈ 1998 ಯಿಂದ 26 ನೇ ಜೂನ್ 2002 ರ (ಈ ಎರಡು ದಿನಗಳು ಸೇರಿದಂತೆ) ನಡುವೆ ಜನಿಸಿದವರಾಗಿರಬೇಕು.

ವಿದ್ಯಾರ್ಹತೆ : ಪಿಯುಸಿ/10+2/ಇಂಟರ್‌ಮೀಡಿಯೇಟ್/ಮಾದ್ಯಮಿಕ ಶಿಕ್ಷಣ ಮಂಡಳಿಗಳ ಸಮಿತಿಯು ಅನುಮೋದಿಸಿರುವ ಸಮಾನ ಪರೀಕ್ಷೆಯನ್ನು ಯಾವುದೇ ವಿಭಾಗ/ವಿಷಯಗಳಲ್ಲಿ ಸರಾಸರಿ ಕನಿಷ್ಠ ಶೇ 50 ರಷ್ಟು ಅಂಕಗಳೊಂದಿಗೆ ಉತ್ತೀರ್ಣರಾಗಿರಬೇಕು.

ಅರ್ಹ ಅಭ್ಯರ್ಥಿಗಳು ದಿನಾಂಕ: 05ನೇ ಡಿಸೆಂಬರ್ 18 ಮತ್ತು 07ನೇ ಡಿಸೆಂಬರ್ 18 (ಅವರ ಜಿಲ್ಲೆಗೆ ಅನುಗುಣವಾಗಿ) ರಂದು 9–00 ಗಂಟೆಗೆ ಮೊದಲು, ಅಂಕಪಟ್ಟಿಯ ಮೂಲಪ್ರತಿ ಮತ್ತು ಮೆಟ್ರಿಕ್ಯುಲೇಷನ್, ಇಂಟರ್‌ಮೀಡಿಯೇಟ್ (10+2/11ನೇ ಪಿಯುಸಿ) ಉತ್ತೀರ್ಣ ಪ್ರಮಾಣ ಪತ್ರ ಮತ್ತು ಎಲ್ಲ ಪ್ರಮಾಣ ಪತ್ರಗಳ ಸ್ವಯಂ ದೃಢೀಕೃತ 04 ನಕಲು ಪ್ರತಿಗಳು, ವಾಸಸ್ಥಳದ ಪ್ರಮಾಣ ಪತ್ರ (ಬೇರೆ ಕಡೆ ಶಿಕ್ಷಣ ಪಡೆದಿರುವ ಅಭ್ಯರ್ಥಿಗಳಿಗೆ) ಮತ್ತು 08 ಪಾಸ್‌ಪೋರ್ಟ್ ಅಳತೆಯ ಇತ್ತೀಚಿನ ಬಣ್ಣದ ಭಾವಚಿತ್ರಗಳೊಂದಿಗೆ ರ‍್ಯಾಲಿ ಸ್ಥಳದಲ್ಲಿ ವರದಿ ಮಾಡಿಕೊಳ್ಳಬೇಕು.

ಹೆಚ್ಚಿನ ವಿವರಗಳಿಗಾಗಿ ಭಾರತೀಯ ವಾಯುಪಡೆಯ ಜಾಲತಾಣವಾದ www.airmenselecion.cdac.in ಗೆ ಲಾಗ್‌ಆನ್ ಮಾಡುವುದು ಅಥವಾ 07 ಏರ್‌ಮೆನ್ ಆಯ್ಕೆ ಕೇಂದ್ರ , ಸಂ. 1, ಕಬ್ಬನ್ ರಸ್ತೆ, ಬೆಂಗಳೂರು – 560 001, ದೂರವಾಣಿ ಸಂಖ್ಯೆ: 08025592199, ಇ–ಮೇಲ್ co.7asc-ka@gov.in ಅನ್ನು ಸಂಪರ್ಕಿಸುವುದು. ಅಭ್ಯರ್ಥಿಗಳು ಹತ್ತಿರದ ಜಿಲ್ಲಾ ಉದ್ಯೋಗ ಅಧಿಕಾರಿಯವರನ್ನು ಸಹ ಸಂಪರ್ಕಿಸಬಹುದಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ಸಂಖ್ಯೆ:

# ಭೂದೃಶ್ಯ ತೋಟಗಾರಿಕೆ ಅಭಿವೃದ್ಧಿ ಮತ್ತು ನಿರ್ವಹಣೆ ತರಬೇತಿಗೆ ಅರ್ಜಿ ಆಹ್ವಾನ

ಬೆಂಗಳೂರು, ನವೆಂಬರ್ 13 (ಕರ್ನಾಟಕ ವಾರ್ತೆ)

2018-19ನೇ ಸಾಲಿನಲ್ಲಿ ದಿನಾಂಕ: 22-11-2018 ರಿಂದ 29-11-2018 ರವರೆಗೆ ತೋಟಗಾರಿಕೆ ತರಬೇತಿ ಕೇಂದ್ರ, ಲಾಲ್‌ಬಾಗ್, ಬೆಂಗಳೂರು ಇಲ್ಲಿ ನಡೆಯುವ 6 (ಆರು) ಅವಧಿಯ ಭೂದೃಶ್ಯ ತೋಟಗಾರಿಕೆ ಅಭಿವೃದ್ಧಿ ಮತ್ತು ನಿರ್ವಹಣೆ ತರಬೇತಿಗೆ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ತರಬೇತಿಗೆ ಆಯ್ಕೆಯಾಗಲು ಅಭ್ಯರ್ಥಿಯು ಕನಿಷ್ಠ 5ನೇ ತರಗತಿ ತೇರ್ಗಡೆಯಾಗಿರಬೇಕು ಕನ್ನಡ ಓದುವುದು, ಬರೆಯುವುದು ಮತ್ತು ಮಾತನಾಡುವುದು ತಿಳಿದಿರಬೇಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಕನಿಷ್ಠ 18 ವರ್ಷ ಮತ್ತು ಗರಿಷ್ಠ 35 ವರ್ಷ ಮತ್ತು ಇತರರಿಗೆ ಕನಿಷ್ಠ 18 ವರ್ಷ ಮತ್ತು ಗರಿಷ್ಠ 33 ವರ್ಷ.

ಕೌಶಲ್ಯ ಅಭಿವೃದ್ಧಿ, ಉದ್ಯಮ ಶೀಲತೆ ಮತ್ತು ಜೀವನೋಪಾಯ ಇಲಾಖೆ ರವರ ಅಧಿಕೃತ ವೆಬ್‌ಸೈಟ್‌ನಲ್ಲಿ ತೋಟಗಾರಿಕೆ ತರಬೇತಿಗಾಗಿ ದಾಖಲಿಸಿರುವ ಅಭ್ಯರ್ಥಿಗಳಿಗೆ ಮತ್ತು ರೈತ ಮಕ್ಕಳಿಗೆ ಆದ್ಯತೆ ನೀಡಲಾಗುವುದು. ಅಭ್ಯರ್ಥಿಗಳನ್ನು ಜೇಷ್ಠತೆ ಆಧಾರದ ಮೇಲೆ ತರಬೇತಿ ಪ್ರವೇಶವನ್ನು ನೀಡಲಾಗುವುದು. ಅರ್ಜಿಗಳನ್ನು ಸಹಾಯಕ ತೋಟಗಾರಿಕೆ ನಿರ್ದೇಶಕರು, ತರಬೇತಿ ಕೇಂದ್ರ, ಲಾಲ್‌ಬಾಗ್, ಬೆಂಗಳೂರು ಅಥವಾ ಇಲಾಖಾ ವೆಬ್‌ಸೈಟ್ www.horticulture.kar.nic.in ನಲ್ಲಿ ದಿನಾಂಕ: 07-11-2018 ರಿಂದ ದಿನಾಂಕ: 19-11-2018 ರವರೆಗೆ ಪಡೆಯಬಹುದಾಗಿರುತ್ತದೆ. ಅಭ್ಯರ್ಥಿಗಳ ಅರ್ಜಿಗಳ ಪರಿಶೀಲನೆ ಮತ್ತು ಆಯ್ಕೆಪಟ್ಟಿ ಪ್ರಕಟಿಸುವ ದಿನಾಂಕ: 20-11-2018.

ಭರ್ತಿಮಾಡಿದ ಅರ್ಜಿಗಳನ್ನು ಸಂಬಂಧಿಸಿದ ದಾಖಲಾತಿಗಳೊಂದಿಗೆ ದಿನಾಂಕ: 19-11-2018 ರಂದು ಸಂಜೆ 5.30 ಗಂಟೆಯೊಳಗೆ ಸಹಾಯಕ ತೋಟಗಾರಿಕೆ ನಿರ್ದೇಶಕರು, ತರಬೇತಿ ಕೇಂದ್ರ ಲಾಲ್‌ಬಾಗ್, ಬೆಂಗಳೂರು ರವರ ಕಚೇರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 9071280906 ಮತ್ತು 080-26564538 ಗಳನ್ನು ಸಂಪರ್ಕಿಸಬಹುದಾಗಿದೆ.

ಸಂಖ್ಯೆ:

# ನವೆಂಬರ್19 ರಿಂದ 25 ರವರೆಗೆ ರಾಜ್ಯಾದ್ಯಂತ "ರಾಷ್ಟ್ರೀಯ ಐಕ್ಯತಾ ಸಪ್ತಾಹ"

ಬೆಂಗಳೂರು, ನವೆಂಬರ್ 13 (ಕರ್ನಾಟಕ ವಾರ್ತೆ)

ನವೆಂಬರ್ 19 ರಿಂದ 25 ರವರೆಗೆ ರಾಜ್ಯಾದ್ಯಂತ "ರಾಷ್ಟ್ರೀಯ ಐಕ್ಯತಾ ಸಪ್ತಾಹ" ವನ್ನು ಆಚರಿಸಲಾಗುತ್ತಿದ್ದು, ಅದರಂತೆ ರಾಷ್ಟ್ರದ ಸ್ವಾತಂತ್ರ್ಯ ಹಾಗೂ ಐಕ್ಯತೆಯನ್ನು ಬಲಪಡಿಸಲು, ದೇಶದಲ್ಲಿ ಹೆಚ್ಚುತ್ತಿರುವ ಹಿಂಸಾಚಾರ ಮತ್ತು ಕೋಮುದ್ವೇಷವನ್ನು ತಡೆಗಟ್ಟುವುದಕ್ಕಾಗಿ ರಾಷ್ಟ್ರೀಯ ಐಕ್ಯತಾ ಸಪ್ತಾಹವನ್ನು ಅರ್ಥಪೂರ್ಣವಾಗಿ ಆಚರಿಸಲು ವಾರವಿಡಿ ವಿವಿಧ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಈ ಹಿನ್ನೆಲೆಯಲ್ಲಿ ನವೆಂಬರ್ 19 ರಂದು "ರಾಷ್ಟ್ರೀಯ ಐಕ್ಯತಾ ದಿನ" ದ ಅಂಗವಾಗಿ ಅಹಿಂಸೆ, ಕೋಮು ಸೌಹಾರ್ದತೆ, ಜಾತ್ಯಾತೀತತೆ ಕುರಿತ ವಿಚಾರ ಸಂಕಿರಣ. ನವೆಂಬರ್ 20 ರಂದು "ಅಲ್ಪಸಂಖ್ಯಾತರ ಕಲ್ಯಾಣ ದಿನ" ದ ಅಂಗವಾಗಿ ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ರೂಪಿಸಿರುವ 15 ಅಂಶಗಳ ಕಾರ್ಯಕ್ರಮಗಳ ಅನುಷ್ಠಾನ ಮತ್ತು ಕೋಮು ಗಲಭೆಪೀಡಿತ ಪ್ರದೇಶಗಳಲ್ಲಿ ಭ್ರಾತೃತ್ವ ಭಾವನೆ ಬೆಳಸುವಂತೆ ಮೆರವಣಿಗೆಗಳನ್ನು ಏರ್ಪಡಿಸಲಾಗುವುದು.

ನವೆಂಬರ್ 21 ರಂದು "ಭಾಷಾ ಸೌಹಾರ್ದತಾ ದಿನ" ಭಾರತದ ಇತರ ಪ್ರದೇಶಗಳ ಭಾಷಾ ಪರಂಪರೆಯನ್ನು ಮತ್ತೊಂದು ಪ್ರದೇಶದ ಜನತೆಗೆ ತಿಳಿ ಹೇಳುವ ಸಲುವಾಗಿ ವಿಶೇಷ ಸಾಹಿತ್ಯಕ ಸಮಾರಂಭ ಮತ್ತು ಕವಿ ಸಮ್ಮೇಳನ, ನವೆಂಬರ್ 22 ರಂದು "ದುರ್ಬಲ ವರ್ಗಗಳ ದಿನ" ದ ಅಂಗವಾಗಿ ಭೂಹೀನ ಕೃಷಿ ಕಾರ್ಮಿಕರಿಗೆ ಹೆಚ್ಚುವರಿ ಜಮೀನು ಮಂಜೂರಾತಿ ಕಾರ್ಯಕ್ರಮ ಸೇರಿದಂತೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ದುರ್ಬಲ ವರ್ಗಗಳ ಅಭಿವೃದ್ಧಿಗೆ ಸರ್ಕಾರ ಹಮ್ಮಿಕೊಂಡಿರುವ ವಿವಿಧ ಕಾರ್ಯಕ್ರಮ ಮತ್ತು ಮರೆವಣಿಗೆ ಏರ್ಪಡಿಸುವುದು.

ನವೆಂಬರ್ 23 ರಂದು "ಸಾಂಸ್ಕೃತಿಕ ಏಕತಾ ದಿನ" ಅಂಗವಾಗಿ ಭಾರತೀಯ ಪರಂಪರೆಯಾದ ವಿವಿಧತೆಯಲ್ಲಿ ಏಕತೆಯನ್ನು ಪ್ರತಿಬಿಂಬಿಸುವಂತೆ ಸಂಸ್ಕೃತಿ ಮತ್ತು ಐಕ್ಯತೆಯನ್ನು ಸಂರಕ್ಷಿಸುವ ಕಾರ್ಯಕ್ರಮ. ನವೆಂಬರ್ 24 ರಂದು "ಮಹಿಳಾ ದಿನ" ಅಂಗವಾಗಿ ಭಾರತೀಯ ಸಮಾಜದಲ್ಲಿ ಮಹಿಳೆಯರ ಪ್ರಾಮುಖ್ಯತೆ ರಾಷ್ಟ್ರ ನಿರ್ಮಾಣ ಹಾಗೂ ಪ್ರಗತಿಯಲ್ಲಿ ಅವರ ಪಾತ್ರವನ್ನು ತೋರಿಸುವಂತಹ ಕಾರ್ಯಕ್ರಮ.

ನವೆಂಬರ್ 25 ರಂದು "ಪರಿಸರ ರಕ್ಷಣಾ ದಿನ " ಅಂಗವಾಗಿ ಜನಸಾಮಾನ್ಯರಿಗೆ ಪರಿಸರದ ಬಗ್ಗೆ ಹಾಗೂ ಅದನ್ನು ಉಳಿಸಿ ಬೆಳೆಸಲು ತಿಳುವಳಿಕೆ ಹೇಳುವ ಸಭೆ ಸಮಾರಂಭ ಹಮ್ಮಿಕೊಳ್ಳಲಾಗುವುದು.

ಸಂಖ್ಯೆ:

## ಅಂತಿಮ ಆಯ್ಕೆಪಟ್ಟಿ ಪ್ರಕಟ

ಬೆಂಗಳೂರು, ನವೆಂಬರ್ 13 (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗವು 2016 ಸಾಲಿನ ರಾಜ್ಯ ಸಿವಿಲ್ ಸೇವೆಗಳಡಿಯ ವಿವಿಧ ಇಲಾಖೆಗಳಲ್ಲಿನ 389 (ಉ.ಮೂ.ವೃ 315+74 ಹೈ.ಕ) ಪ್ರಥಮ ದರ್ಜೆ ಸಹಾಯಕರ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಅಂತಿಮ ಆಯ್ಕೆ ಪಟ್ಟಿಯ ಅಧಿಸೂಚನೆಯನ್ನು ಆಯೋಗದ ವೆಬ್‌ಸೈಟ್ http//kpsc.kar.nic.in.-Final selection list ರಡಿಯಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಲಾಗಿದೆ ಎಂದು ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ತಿಳಿಸಿದೆ.

ಸಂಖ್ಯೆ:

## ನವೆಂಬರ್ 16 ಮತ್ತು 17 ರಂದು ಪತ್ರಕರ್ತರಿಗೆ ವಿಶೇಷ ಮಾಹಿತಿ ಕಾರ್ಯಾಗಾರ

ಬೆಂಗಳೂರು, ನವೆಂಬರ್ 13 (ಕರ್ನಾಟಕ ವಾರ್ತೆ)

ಕರ್ನಾಟಕ ಅರಣ್ಯ ಇಲಾಖೆಯು ಹೆಸರಾಂತ ಮಲೆ ಮಹದೇಶ್ವರ ಬೆಟ್ಟ, ವನ್ಯಜೀವಿ ವಿಭಾಗ, ಗೋಪಿನಾಥಂ ಇಲ್ಲಿ ನವೆಂಬರ್ 16 ಮತ್ತು 17 ರಂದು ಪತ್ರಕರ್ತರಿಗಾಗಿ ವಿಶೇಷ ಮಾಹಿತಿ ಕಾರ್ಯಾಗಾರವನ್ನು ಹಮ್ಮಿಕೊಂಡಿದೆ.

ಈ ಎರಡು ದಿನಗಳ ಕಾಲ ನಡೆಯಲಿರುವ ಕಾರ್ಯಾಗಾರದಲ್ಲಿ ಅರಣ್ಯಾಧಿಕಾರಿಗಳು, ವಿಜ್ಞಾನಿಗಳು ಹಾಗೂ ವನ್ಯಜೀವಿ ಪ್ರೇಮಿಗಳು ವಿಚಾರಗಳನ್ನು ಮಂಡಿಸಲಿದ್ದಾರೆ. ಕಾರ್ಯಾಗಾರದ ಅಂಗವಾಗಿ ಕಾಡಿನ ಕೆಲ ಪ್ರದೇಶಗಳಿಗೆ, ಕೆಳ ಹಳ್ಳಿಗಳಿಗೆ ಭೇಟಿ ಸಹ ಏರ್ಪಡಿಸಿ ವಿಚಾರಗಳನ್ನು ಕ್ಷೇತ್ರ ಪ್ರಾತ್ಯಕ್ಷಿಕೆ ಮೂಲಕವೂ ತಿಳಿಸಿಕೊಡುವ ಯೋಜನೆ ರೂಪಿಸಲಾಗಿದೆ.

ಈ ಹಿನ್ನೆಲೆಯಲ್ಲಿ ತಮ್ಮ ಹೆಸರಾಂತ ಮಾಧ್ಯಮ ಸಂಸ್ಥೆಯಿಂದ ಒಬ್ಬ ಹಿರಿಯ ವರದಿಗಾರರು/ಹಿರಿಯ ಉಪ ಸಂಪಾದಕರನ್ನು ಈ ಕಾರ್ಯಾಗಾರಕ್ಕೆ ಕಳುಸಿಕೊಡುವಂತೆ ಹಾಗೂ ನಿಯೋಜಿಸಿದ ಪತ್ರಕರ್ತರ ಹೆಸರು, ಹುದ್ದೆ, ದೂರವಾಣಿ ಸಂಖ್ಯೆ ಹಾಗೂ ಇ-ಮೇಲ್ ಅನ್ನು apccfci@gmail.com ಗೆ ದಿನಾಂಕ: 14-11-2018 ರ ಒಳಗಡೆ ಕಳುಹಿಸಬೇಕಾಗಿ ಕೋರಿದೆ.

ಹೆಚ್ಚಿನ ಮಾಹಿತಿಗಾಗಿ ಶ್ರೀ ಏಡುಕೊಂಡಲು ವಿ. ಭಾಅಸೇ ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಲೆಮಹದೇಶ್ವರ ಬೆಟ್ಟ, ವನ್ಯಜೀವಿ ವಿಭಾಗ, ಕೊಳ್ಳೇಗಾಲ ಇವರ ಮೊಬೈಲ್ ಸಂಖ್ಯೆ 9410956294 ಇ-ಮೇಲ್ ಐಡಿ kv_kondal@yahoo.com ಇವರನ್ನು ಸಂಪರ್ಕಿಸಬಹುದಾಗಿದೆ

ಪತ್ರಕರ್ತರನ್ನು ಕಾರ್ಯಾಗಾರದ ಸ್ಥಳಕ್ಕೆ ಕರೆದೊಯ್ಯಲು ಬೆಂಗಳೂರು, ಮೈಸೂರು, ಚಾಮರಾಜನಗರದಿಂದ ವಾಹನ ಸೌಲಭ್ಯ ಹಾಗೂ ಕಾರ್ಯಾಗಾರದಲ್ಲಿ ಊಟ, ವಸತಿ ಸೌಕರ್ಯದ ವೆಚ್ಚವನ್ನು ಸಹ ಇಲಾಖೆ ಭರಿಸಲಿದೆ

## ಮೂಲ ದಾಖಲಾತಿಗಳ ಪರಿಶೀಲನೆ

**ಬೆಂಗಳೂರು, ನವೆಂಬರ್ 13 (ಕರ್ನಾಟಕ ವಾರ್ತೆ)**

ಕರ್ನಾಟಕ ಲೋಕ ಸೇವಾ ಆಯೋಗವು ಅಧಿಸೂಚನೆ ಸಂಖ್ಯೆ: ಆರ್(2) 1084/17-18/ಪಿಎಸ್‌ಸಿ ದಿ:23-06-2017 ರ ಅಧಿಸೂಚನೆಯಲ್ಲಿ ಅಧಿಸೂಚಿಸಿದ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯ ವಸತಿ ಶಾಲೆಗಳಲ್ಲಿನ **ಕನ್ನಡ ಭಾಷಾ ಶಿಕ್ಷಕರು 221+32 (ಹೈ.ಕ) ಮತ್ತು ಪ್ರಥಮ ದರ್ಜೆ ಸಹಾಯಕರು ಕಮ್ ಕಂಪ್ಯೂಟರ್ ಆಪರೇಟರ್ 375+(90 ಹೈ.ಕ)** ಹುದ್ದೆಗಳಿಗೆ ಸಂಬಂಧಿಸಿದಂತೆ, ಮೂಲ ದಾಖಲಾತಿಗಳ ಪರಿಶೀಲನೆಗೆ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಅಭ್ಯರ್ಥಿಗಳ ಮಾಹಿತಿಗಾಗಿ ಆಯೋಗದ ಅಂತರ್ಜಾಲದಲ್ಲಿ http://kpsc.kar.nic.in ಪ್ರಕಟಿಸಲಾಗಿದೆ. ಕನ್ನಡ ಭಾಷಾ ಶಿಕ್ಷಕರ ಹುದ್ದೆಗಳ ಮೂಲ ದಾಖಲೆಗಳ ಪರಿಶೀಲನಾ ಕಾರ್ಯವನ್ನು ದಿ:19-11-18 ರಿಂದ 24-11-18 ರವರೆಗೆ ನಡೆಸಲು ಹಾಗೂ ಪ್ರಥಮ ದರ್ಜೆ ಸಹಾಯಕರು ಕಮ್ ಕಂಪ್ಯೂಟರ್ ಆಪರೇಟರ್ ಹುದ್ದೆಗಳ ಮೂಲ ದಾಖಲೆಗಳ ಪರಿಶೀಲನಾ ಕಾರ್ಯವನ್ನು ದಿ:27-11-18 ರಿಂದ 06-12-18 ರವರೆಗೆ ನಡೆಸಲು ತೀರ್ಮಾನಿಸಲಾಗಿದ್ದು, ಅರ್ಹ ಅಭ್ಯರ್ಥಿಗಳಿಗೆ ಸೂಚನಾ ಪತ್ರಗಳನ್ನು ಈಗಾಗಲೇ ಅಂಚೆ ಮೂಲಕ ರವಾನಿಸಲಾಗಿರುತ್ತದೆ. ಸೂಚನಾ ಪತ್ರವು ಸರಿಯಾದ ಸಮಯದಲ್ಲಿ ತಲುಪದಿದ್ದಲ್ಲಿ, ಅರ್ಹ

ಅಭ್ಯರ್ಥಿಗಳು ಪಟ್ಟಿಯ ಪ್ರಿಂಟ್‌ಔಟ್‌ನ್ನು ಪಡೆದು ನಿಗದಿತ ದಿನಾಂಕದಂದು, ಆಯೋಗದ ಕೇಂದ್ರ ಕಛೇರಿ, ಬೆಂಗಳೂರು, ಇಲ್ಲಿ ಹಾಜರಾಗತಕ್ಕದ್ದು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## Document Verification

Bengaluru, November 13 (Karnataka Information)

Karnataka Public Service Commission has published the eligibility list of Candidates for Verification of original documents for the post **of Kannada Language Teachers 221+32 (H.K)** and **First Division Assistant Cum Computer Operator 375+90 (H.K)** in the Department of The Karnataka Residential Educational Institutions Society, vide notification number: R(2)1084/17-18/PSC dated. 23-06-2017. The date fixed for verification of original documents for the verification of Kannada language teacher is from 19-11-2018 to 24-11-2018 and for First Division Assistant Cum Computer Operator is from 27-11-2018 to 06-12 -2018 at the office of the KPSC, Udyoga Souda, Banglore-560001.

**The Verification notice has already been dispatched to Eligible candidates. Those Candidates who have not received the notice by post, may attend with the printout of "List of Eligibility candidates" announced in the Commission's Website "http:// kpsc.kar.nic.in" says official press release.**

## ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟ

**ಬೆಂಗಳೂರು, ನವೆಂಬರ್ 13 (ಕರ್ನಾಟಕ ವಾರ್ತೆ)**

ಕರ್ನಾಟಕ ಲೋಕಸೇವಾ ಆಯೋಗವು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿನ ಗ್ರೂಪ್ 'ಎ' ವೃಂದದ ವ್ಯವಸ್ಥಾಪಕ ಐ.ಟಿ 01 ಹುದ್ದೆಗೆ ದಿನಾಂಕ: 02–11–2018 ರಂದು ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಆಯೋಗದ ಅಂತರ್ಜಾಲದಲ್ಲಿ **"http://kpsc.kar.nic.in"** ಪ್ರಕಟಿಸಲಾಗಿದೆ, ಆಕ್ಷೇಪಣೆಗಳಿದ್ದಲ್ಲಿ ಆಕ್ಷೇಪಣೆಗಳನ್ನು ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಲಾದ ದಿನಾಂಕದಿಂದ 7 ದಿನಗಳೊಳಗಾಗಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

## Provisional Selection List

Bengaluru November 13 (Karnataka Information)

Karnataka Public Service Commission has published the Provisional Selection List on 02-11-2018, in the Commission Website http://kpsc.kar.nic.in, for the Group 'A' Manager (IT) 01 post in the Department of The Karnataka State Pollution Control Board. The Objections if any is to be filed within 7 days from the date of publication of the Provisional list says official press release.

## ನೂತನ ಶಾಸಕರುಗಳಿಗೆ ತರಬೇತಿ

**ಬೆಂಗಳೂರು, ನವೆಂಬರ್ 13 (ಕರ್ನಾಟಕ ವಾರ್ತೆ)**

**ಕರ್ನಾಟಕ ವಿಧಾನ ಮಂಡಲ ತರಬೇತಿ ಸಂಸ್ಥೆಯ ವತಿಯಿಂದ 15 ನೇ ವಿಧಾನಸಭೆಗೆ ಹಾಗೂ ವಿಧಾನ ಪರಿಷತ್ತಿಗೆ ಪ್ರಥಮ ಬಾರಿಗೆ ಆಯ್ಕೆಯಾಗಿರುವ ಸದಸ್ಯರುಗಳಿಗೆ ತರಬೇತಿ ಶಿಬಿರವನ್ನು ನವೆಂಬರ್ 15 ಮತ್ತು 16 ರಂದು ವಿಕಾಸ ಸೌಧದ 4 ನೇ ಮಹಡಿಯ ಕೊಠಡಿ ಸಂಖ್ಯೆ 419ರಲ್ಲಿ ಆಯೋಜಿಸಲಾಗಿದೆ. ಈ ಸಮಾರಂಭ ಉದ್ಘಾಟನೆಯನ್ನು ನವೆಂಬರ್ 15 ರಂದು ಬೆಳಿಗ್ಗೆ 10–00 ಗಂಟೆಗೆ ಸಭಾಪತಿಗಳು ಹಾಗೂ ಸಭಾಧ್ಯಕ್ಷರು ನೆರವೇರಿಸಲಿದ್ದಾರೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.**

## ಕಾರ್ಯಕ್ರಮ ಮುಂದೂಡಿಕೆ

**ಬೆಂಗಳೂರು, ನವೆಂಬರ್ 13 (ಕರ್ನಾಟಕ ವಾರ್ತೆ)**

ಕೇಂದ್ರ ಸಚಿವರಾದ ಅನಂತ ಕುಮಾರ್ ಅವರ ನಿಧನದಿಂದ ರಾಜ್ಯದಲ್ಲಿ ಶೋಕಾಚರಣೆ ಜಾರಿಯಲ್ಲಿರುವುದರಿಂದ ದಿನಾಂಕ: 14.11.2018ರಂದು ಬಾಲಭವನ, ಕಬ್ಬನ್ ಉದ್ಯಾನವನ, ಬೆಂಗಳೂರು ಇಲ್ಲಿ ಆಚರಿಸಲಾಗುವ ಮಕ್ಕಳ ದಿನಾಚರಣೆಯ ಕಾರ್ಯಕ್ರಮವನ್ನು ಮುಂದೂಡಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಪ್ರಕಟಣೆ ತಿಳಿಸಿದೆ.

# Children’s Day Programme postponed

Bengaluru, November 13 (Karnataka Information)

In view of the sad demise of Shri. Ananth Kumar, Hon’ble Minister for Chemicals and Fertilizers and Parliamentary Affairs, Government of India, the Karnataka State vide Notification dated:12.11.2018 has declared a three day mourning from 12/11/2018 to 14/11/2018 during which no public function or cultural programmes shall be held on the said dates.

Therefore, the Children’s Day Programme scheduled to be held at Balbhavan, Cubbon Park, Bengaluru on 14.11.2018 has been postponed says official press release.